# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 129 |
| ಸದಸ್ಯರ ಹೆಸರು | : | ಶ್ರೀ ಘೋಟ್ನೇಕರ್ ಶ್ರೀಕಾಂತ ಲಕ್ಷ್ಮಣ |
| ಉತ್ತರಿಸುವ ದಿನಾಂಕ | : | 10/07/2018 |
| ಉತ್ತರಿಸುವ ಸಚಿವರು | : | ಉಪ ಮುಖ್ಯ ಮಂತ್ರಿಯವರು |

| ಕ್ರಸ | ಪ್ರಶ್ನೆ | ಉತ್ತರ |
|---|---|---|
| ಅ | ಕೆನರಾ ವೃತ್ತದ ಹಳಿಯಾಳ ವಿಭಾಗದ ಸಾಬ್ರಾಣಿ ವಲಯದಲ್ಲಿ ಬೆಲೆ ಬಾಳುವ ಸಾಗವಾನಿ ಮರದ ತುಂಡುಗಳು ಪೊಲೀಸ್ ವಾಹನದಲ್ಲಿ ಸಿಕ್ಕಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ. | ಬಂದಿದೆ. |
| ಆ | ಈ ಬಗ್ಗೆ ಸಂಬಂಧಿಸಿದ ಇಲಾಖೆಯವರು ತನಿಖೆಯಲ್ಲಿ ಹಸ್ತಕ್ಷೇಪ ಮಾಡಿರುವುದು ನಿಜವೇ. | ಈ ಬಗ್ಗೆ ಇಲಾಖೆಯವರು ತನಿಖೆಯಲ್ಲಿ ಯಾವುದೇ ತರಹದ ಹಸ್ತಕ್ಷೇಪ ಮಾಡಿದ್ದು ಇರುವುದಿಲ್ಲ.<br><br>ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲೂಕಿನಲ್ಲಿ ದಿನಾಂಕ:05-01-2018 ರಂದು ಸಾಯಂಕಾಲ ಗಾಡಗೇರಾ ಹಾಗೂ ವಾಡಾ ರಸ್ತೆಯಲ್ಲಿ ಸಿಪಿಐ, ಹಳಿಯಾಳ ರವರು ಸಿಬ್ಬಂದಿಯವರನ್ನು ಹಾಗೂ ಡಿಎಆರ್ ವಾಹನವನ್ನು ಜೊತೆಗೆ ಕರೆದುಕೊಂಡು ಗಾಡಗೇರಾ ಗ್ರಾಮಕ್ಕೆ ಹೋಗಿ ಅನಧಿಕೃತವಾಗಿ ಸಂಗ್ರಹಿಸಿಟ್ಟ ಸಾಗವಾನಿ ಮರದ ತುಂಡುಗಳನ್ನು ಪಂಚನಾಮೆ ಪ್ರಕಾರ ಜಪ್ತಿ ಪಡಿಸಿಕೊಂಡಿರುತ್ತಾರೆ. ಜಪ್ತಿ ಪಡಿಸಿಕೊಂಡ ಸಾಗವಾನಿ ತುಂಡುಗಳನ್ನು ಡಿಎಆರ್ ಪೊಲೀಸ್ ವಾಹನದಲ್ಲಿ ಠಾಣೆಗೆ ಸಾಗಿಸಿರುತ್ತಾರೆ ಹಾಗೂ ಆ ಕುರಿತು ದಿನಾಂಕ: 06-01-2018 ರಂದು 00-30 ಗಂಟೆಗೆ ಸರ್ಕಾರದ ಪರವಾಗಿ ಸಿಪಿಐ, ಹಳಿಯಾಳ ರವರು ದೂರು ನೀಡಿದಂತೆ ಹಳಿಯಾಳ ಪೊಲೀಸ ಠಾಣೆ ಮೊಕದ್ದಮೆ ಸಂಖ್ಯೆ: 04/2018 ಕಲಂ 24(ಇ) ಕರ್ನಾಟಕ ಅರಣ್ಯ ಕಾಯ್ದೆ ಮತ್ತು 379 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿರುತ್ತದೆ. ಸದರಿ ಪ್ರಕರಣವು ತನಿಖೆಯಲ್ಲಿರುತ್ತದೆ.<br><br>ಪ್ರಕರಣದಲ್ಲಿ ಸಿ.ಪಿ.ಐ. ಹಳಿಯಾಳ ರವರು ಕಾನೂನು ಸುವ್ಯವಸ್ಥೆಗೆ ಡಿಎಸ್‌ಪಿ, ದಾಂಡೇಲಿ ರವರ ಉಸ್ತುವಾರಿಯಲ್ಲಿ ಮೀಸಲಿರಿಸಿದ್ದ ಡಿಎಆರ್ ವಾಹನವನ್ನು ಡಿಎಸ್‌ಪಿ, ದಾಂಡೇಲಿ ರವರ ಪರವಾನಗಿ ಪಡೆಯದೇ ದಾಳಿಗೆ ತೆಗೆದುಕೊಂಡು ಹೋಗಿ ತೀವ್ರ ಬೇಜವಾಬ್ದಾರಿ ಪ್ರದರ್ಶಿಸಿರುತ್ತಾರೆ. ಹಾಗೂ ಡಿಎಆರ್ ವಾಹನ ಚಾಲಕನು ಸದರಿ ವಾಹನವು ಪ್ರಯಾಣಿಕರ ಸಾಗಾಟ ವಾಹನ ಎಂಬ ತಿಳುವಳಿಕೆ ಇದ್ದರೂ ಬೇಜವಾಬ್ದಾರಿಯಿಂದ ಆ ವಾಹನದಲ್ಲಿ ಸಾಗವಾನಿ ತುಂಡುಗಳನ್ನು ಸಾಗಾಟ ಮಾಡಿ ಚಾಲಕನ ಕರ್ತವ್ಯದಲ್ಲಿ ತೀರ್ವ ನಿರ್ಲಕ್ಷ ಪ್ರದರ್ಶಿಸಿರುತ್ತಾರೆ. ಈ ಪ್ರಕರಣದಲ್ಲಿ ಡಿಎಆರ್ ವಾಹನದ ನಿರ್ವಹಣೆಯಲ್ಲಿ ತೀವ್ರ ನಿರ್ಲಕ್ಷತನ ಹಾಗೂ ಬೇಜವಾಬ್ದಾರಿಯನ್ನು ಪ್ರದರ್ಶಿಸಿದ ಸಿಪಿಐ, ಹಳಿಯಾಳ ಹಾಗೂ ವಾಹನ ಚಾಲಕನ ಮೇಲೆ ಶಿಸ್ತು ಕ್ರಮ ಜರುಗಿಸಲಾಗಿರುತ್ತದೆ. |
| ಇ | ಪ್ರಕರಣದಲ್ಲಿ ಶಾಮೀಲಾದ ಅಧಿಕಾರಿ ವರ್ಗದವರ ವಿವರ, ವಾಹನದ ವಿವರ ಹಾಗೂ ಈ ಪ್ರಕರಣದಲ್ಲಿ ಭಾಗಿಯಾದವರ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು) | (ಆ ಮತ್ತು ಇ ಪ್ರಶ್ನೆಗಳಿಗೆ ಮೇಲಿನ ಉತ್ತರ ಅನ್ವಯ) |

ಹೆಚ್‌ಡಿ 384 ಎಸ್‌ಎಸ್‌ಟಿ 2018

(ಡಾ॥ ಜಿ.ಪರಮೇಶ್ವರ)
ಉಪ ಮುಖ್ಯ ಮಂತ್ರಿಯವರು